ಸತ್ರ ಪ್ರಕರಣ ಸಂಖ್ಯೆ: 4/2024

| | |
|---|---|
| ಪ್ರಾಸಾ | 03 |
| ಚಾಸಾ | 10 |

ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ: 4/2024**

**ದಿನಾಂಕ: 24.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ವೈ.ಕೆ. ನರಸಿಂಹಯ್ಯ |
| ತಂದೆಯ ಹೆಸರು | : | ಲೇಟ್.ಕಾಳಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಎಲೆಹಳ್ಳಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ದಿ: 20.03.2021 ರ ಸಾಕ್ಷಿಯು ನಿಪಿ 5 ಮತ್ತು 6 ರಲ್ಲಿರುವ ಸಹಿಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿ ಸಹಿಯನ್ನು ನಿಪಿ 5(ಬಿ) ಮತ್ತು ನಿಪಿ 6(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2023 ರಲ್ಲಿ ಚಿಕ್ಕಕಿರುಗಂಬಿಯಲ್ಲಿ ಪೊಲೀಸ್ ಜೀಪಿನ ಬಳಿ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ಪೊಲೀಸರು ನನ್ನ ಸಹಿ ಪಡೆದರೋ ಎಂದು ನನಗೆ ಗೊತ್ತಿರುವುದಿಲ್ಲ.

2. ಸಾಕ್ಷಿಯು 7 ಮತ್ತು 8 ರಲ್ಲಿ ತನ್ನ, ಪ್ರಾಸಾ-2, ಆರೋಪಿ ಹಾಗೂ ಪೊಲೀಸರ

| | |
|---|---|
| ಪ್ರಾಸಾ | 03 |
| ಚಾಸಾ | 10 |

ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೊಟೋದಲ್ಲಿ ಯಾವ ಸ್ಥಳದಲ್ಲಿ ತೆಗೆದಿದ್ದಾರೆಂದು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಮಚ್ಚನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮಚ್ಚನ್ನು ನೋಡಿ ಗುರುತಿಸಿರುವುದಿಲ್ಲ. ನಾನು ಸಹಿ ಹಾಕಿದಾಗ ಆರೋಪಿ ಇರಲಿಲ್ಲ. ಆನಂತರ ಜೀಪಿನಲ್ಲಿದ್ದ ಆರೋಪಿಯನ್ನು ಕರೆಯಿಸಿ ಪೊಟೊವನ್ನು ತೆಗೆದಿರುತ್ತಾರೆ. ಸಾಕ್ಷಿಯು ನಿಪಿ 7 ಮತ್ತು 8 ರಲ್ಲಿ ಆರೋಪಿ ಮಚ್ಚು ಹಿಡಿದುಕೊಂಡಿರುವುದು ನಾನು ಗಮನಿಸಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ ಪ್ರತಾಪ ಎಂದು ನೋಡಿ ಗುರುತಿಸಿರುತ್ತಾರೆ. ಆರೋಪಿಯ ವಿರುದ್ದ ಏನು ಕೇಸ್ ಇದೆ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು: ವಿಶೇಷ ಸಾರ್ವಜನಿಕ ಅಭಿಯೋಜಕರಿಂದ:-</u>**

3. ಸಾಕ್ಷಿಗೆ ನೀವು ದಿ: 20.03.2021 ರಂದು ಬೆ: 11.00 ಗಂಟೆಗೆ ಪೊಲೀಸರು ಆರೋಪಿಯ ಮನೆ ಬಳಿ ಆತನೊಂದಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಆರೋಪಿ ತನ್ನ ಮನೆಯಲ್ಲಿ ಬೀರುವಿನ ಕೆಳಗಿದ್ದ ನ್ಯಾಯಾಲಯದ

| | |
|---|---|
| ಪ್ರಾಸಾ | 03 |
| ಚಾಸಾ | 10 |

ಮುಂದಿರುವ ಮಚ್ಚಿನಿಂದ ಆರೋಪಿ ಹಲ್ಲೆ ಮಾಡಿರುವುದಾಗಿ ಹೇಳಿ ಹಾಜರುಪಡಿಸಿರುವುದರಿಂದ ಪೊಲೀಸರು ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 7 ರಲ್ಲಿರುವ ಆರೋಪಿ ಇದೇ ಮಚ್ಚಿನಿಂದ ಹಲ್ಲೆ ಮಾಡಿದ್ದು ಎಂದು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಆರೋಪಿ ಮತ್ತು ನಾನು ಅನ್ಯೋನ್ಯವಾಗಿದ್ದೇವೆಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಪ್ರಕರಣ ದಾಖಲಾಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಹೆಚ್.ಸಿ.ಎಂ. ವಕೀಲರಿಂದ:**

ಇರುವುದಿಲ್ಲ.

**ಮರುವಿಚಾರಣೆ: ಇಲ್ಲ.**

**(ದಿನಾಂಕ: 24.11.2025 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**